ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.547/2018 CW-4 PW-2

| | | |
|---|---|---|
| ಹೆಸರು | : | ಪ್ರಲ್ಹಾದ ಗುಡಿ |
| ತಂದೆಯ/ಗಂಡನ ಹೆಸರು | : | ನರಸಿಂಹಚಾರ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವಕೀಲರು |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 05-09-2022

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

1995 ರಿಂದ ಇಲ್ಲಿಯವರೆಗೆ ಸಿಂಧನೂರಿನಲ್ಲಿ ವಕೀಲ ವೃತ್ತಿ ಮಾಡುತ್ತಿದ್ದೇನೆ. ಅದೇರೀತಿ ನಾನು ಐಸಿಐಸಿಐ ಬ್ಯಾಂಕ್ ಮತ್ತು ಇತರೆ ಬ್ಯಾಂಕಿನ ಕಾನೂನು ಸಲಹೆಗಾರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಚಾಸಾ-1 ಮತ್ತು 6 ರವರ ಪರಿಚಯ ಇರುವುದಿಲ್ಲ. ಚಾಸಾ-7 ರವರ ಪರಿಚಯ ಇದೆ.

ದಿಃ 25-01-2016 ರಂದು ಸಿರಗುಪ್ಪ ಶಾಖೆಯ ಚಾಸಾ-1 ರವರ ಸಾಲದ ಅರ್ಜಿಯೊಂದಿಗೆ ಪಹಣಿ, ಮ್ಯೂಟೇಶನ, ಗೇಣಿ, ಭೂ ಹಿಡುವಳಿ, ಬೇಬಾಕಿ, ಇ.ಸಿ., ಚಕಬಂದಿ ಪ್ರಮಾಣ ಪತ್ರ ಮತ್ತು ವಂಶಾವಳಿ ದಾಖಲೆಗಳನ್ನು ಚಾಸಾ-7 ರವರು ನನಗೆ ನನ್ನ ಕಾನೂನು ಅಭಿಪ್ರಾಯವನ್ನು ನೀಡಲು ಕೊಟ್ಟಿದ್ದರು. ದಿಃ 25-05-2016 ರಂದು ನಾನು ನನ್ನ ಅಭಿಪ್ರಾಯವನ್ನು ಬ್ಯಾಂಕಿಗೆ ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಭಿಪ್ರಾಯದ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದು ನಕಲು ಪ್ರತಿ ಆಗಿದ್ದರಿಂದ ಅದರಲ್ಲಿಯ ಸಾಕ್ಷಿ ಸಹಿಯನ್ನು ಗುರುತಿಸಿಲ್ಲ. ನನಗೆ ವಹಿಸಿಕೊಟ್ಟ ದಾಖಲೆಗಳ ಆಧಾರದ ಮೇಲೆ ನನ್ನ ಅಭಿಪ್ರಾಯವನ್ನು ನೀಡುರುತ್ತೇನೆ.

ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಯಾರು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ

ಆರೋಪಿತರೆಲ್ಲರೂ ಒಳಸಂಚು ಮಾಡಿ ಚಾಸಾ-1 ಮತ್ತು ಬ್ಯಾಂಕಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಆರೋಪಿಯು ಚಾಸಾ-1 ರವರ ಮಗನಾಗಿದ್ದರೂ ಕೂಡಾ ಚುಣಾವಣಾ ಗುರುತಿನ ಚೀಟಿಯಲ್ಲಿ 1 ನೇ ಆರೋಪಿಯ ಭಾವಚಿತ್ರ ಅಂಟಿಸಿ ಜನನ ದಿನಾಂಕವನ್ನು ಸೃಷ್ಟಿಸಿ ದಾಖಲಾತಿಗಳನ್ನು ನೀಡಿ ಅಡಮಾನ ಮಾಡಿ, ಬೆಳೆಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಬ್ಯಾಂಕಿಗಪಿ 8,05,200/- ಗಳಿಗೆ ಅಡಮಾನ ಮಾಡಿ, 5,00,000/- ಬೆಳೆ ಸಾಲ ಪಡೆದು ಚಾಸಾ-1 ಮತ್ತು ಬ್ಯಾಂಕಿಗೆ ಮೋಸ ಮಾಡಿದ್ದಾರೆ ಎಂದರೆ ಸರಿ ಅಲ್ಲ. ಈ ಬಗ್ಗೆ ನಾನು 27-09-2017 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.